# ಪ್ರಧಾನ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.ಕಾರಿಯವರ ನ್ಯಾಯಾಲಯ, ಮಡಿಕೇರಿ, ಕೊಡಗು.

## ಒ. ಎಸ್. ಸಂಖ್ಯೆಃ 1/2022

ಪಿಡಬ್ಲ್ಯುಃ 1

ದಿನಾಂಕಃ **19.04.2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಕುಂಚೆಟ್ಟಿರ ಎ. ಪೂವಯ್ಯ |
| ತಂದೆಯ ಹೆಸರು | - ಲೇಟ್ ಕೆ.ಪಿ. ಅಯ್ಯಣ್ಣ |
| ವಯಸ್ಸು | - 66 ವರ್ಷ |
| ವೃತ್ತಿ | - ವ್ಯವಸಾಯ |
| ವಾಸಸ್ಥಳ | - ಕಾಟಕೇರಿ ಗ್ರಾಮ |

ಮುಖ್ಯ ವಿಚಾರಣೆಃ ವಾದಿಯವರ ಪರವಾಗಿಃ- ಶ್ರೀ. ಎನ್ ಹೆಚ್ ಎಫ್ ವಕೀಲರಿಂದಃ-

ನಾನು ಈ ದಾವಾದಲ್ಲಿ ವಾದಿಯಾಗಿದ್ದೇನೆ. ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ ಸದರಿ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ನಾನೇ ಖುದ್ದಾಗಿ ಬರೆಸಿರುತ್ತೇನೆ ಹಾಗೂ ಅದರಲ್ಲಿರುವ ಅಂಶಗಳು ಸತ್ಯವೆಂದು ಪ್ರಮಾಣೀಕರಿಸುತ್ತೇನೆ.

2. ನಾನು ನನ್ನ ಪರವಾಗಿ ಮುಂದಿನ ದಾಖಲೆಗಳನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ನಿಶಾನೆಗಳನ್ನಾಗಿ ಗುರುತಿಸಬೇಕಾಗಿ ಕೋರಿಕೊಳ್ಳುತ್ತೇನೆ.

3. ದಿಃ 12.04.2000 ರ ವಿಭಾಗದ ಪತ್ರದ ದೃಢೀಕೃತ ದಾಖಲೆಯನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಕಾಟಕೇರಿ ಗ್ರಾಮದ ಸರ್ವೆ ನಂಬರ್ 121/1 ಮತ್ತು 121/2 ರ ದೃಢೀಕೃತ ನಕಾಶೆಯನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು. 14 ಭಾವಚಿತ್ರಗಳನ್ನು ಹಾಜರು ಮಾಡಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ3 ರಿಂದ ನಿಪಿ-16 ಎಂದು ಗುರುತಿಸಲಾಯಿತು. ದೃಢೀಕೃತ ಒ ಎಸ್ ನಂಬರ್ 140/10 ಮತ್ತು ಆರ್ ಎ 5/2016 ರ ಡಿಕ್ರಿಯನ್ನು ಹಾಜರು ಮಾಡಿದ್ದೇನೆ ಅವುಗಳನ್ನು ಕ್ರಮವಾಗಿ ನಿಪಿ17 ಮತ್ತು ನಿಪಿ-18 ಎಂದು ಗುರುತಿಸಲಾಯಿತು. ಮಡಿಕೇರಿ

ಗ್ರಾಮಾಂತರ ಪೊಲೀಸರು ನೀಡಿದ ಸ್ವೀಕೃತಿ ಮತ್ತು ಹಿಂಬರಹವನ್ನು ಹಾಜರು ಮಾಡಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ19 ಮತ್ತು ನಿಪಿ20 ಎಂದು ಗುರುತಿಸಲಾಯಿತು. ಕಾಟಕೇರಿ ಗ್ರಾಮದ ಸರ್ವೆ ನಂಬರ್ 121/1 ಮತ್ತು 121/2 ರ ಪಿ ಟಿ ಶೀಟ್/ಸರ್ವೆ ನಕಾಶೆಯನ್ನು ಹಾಜರು ಮಾಡಿದ್ದೇನೆ. ಅದನ್ನು ನಿಪಿ21 ಎಂದು ಗುರುತಿಸಲಾಯಿತು. ಆದ್ದರಿಂದ ನಾನು ದಾವಾದಲ್ಲಿ ಕೋರಿದಂತೆ ಆದೇಶ ಮಾಡಬೇಕಾಗಿ ಕೋರಿಕೊಳ್ಳುತ್ತೇನೆ.

ಪಾಟೀ ಸವಾಲುಃ- ಪ್ರತಿವಾದಿ ಪರವಾಗಿಃ ಶ್ರೀ. ಬಿ ಎಸ್ ಸಿ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಜೆ ಎಂ ಎಫ್ ಸಿ, ಮಡಿಕೇರಿ.